ಊ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ

(1589): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಟಿ. ನರಸೀಪುರ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದಲ್ಲಿ; ಯಾವಾಗ ಕೆಲಸ ಪ್ರಾರಂಭಿಸುವಿರಿ, ಹಾಗೂ ಅದಕ್ಕೆ ತಗಲುವ ವೆಚ್ಚವೆಷ್ಟು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಬಂದಿದೆ.

ಆ. ಪರಿಶೀಲನೆಯಲ್ಲಿದೆ

ಮಾತೃ ಇಲಾಖೆಯಿಂದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ

(1591): ಶ್ರೀ ಕೆ.ಸಿ. ಮೊಡ್ಡೇಕರ್ ದೇಸಾಯಿ (ಹಿರೇಬಾಗೇವಾಡಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಾತೃ ಇಲಾಖೆಯಿಂದ ಸರ್ಕಾರದ ಬೇರೆ ಇಲಾಖೆಗೆ ಸರ್ಕಾರಿ ನೌಕರರ ಪ್ರತಿನಿಯೋಜನೆಯ ಗರಿಷ್ಠ ಅವಧಿ ಬಗ್ಗೆ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು;

ಆ. ಪ್ರತಿನಿಯೋಜನೆ ಗರಿಷ್ಠ ಅವಧಿಯನ್ನು ಮೀರಿ ಬೆಳಗಾವಿ ಜಿಲ್ಲಾಧಿಕಾರಿಗಳ ಬೆಳಗಾವಿ ಕಛೇರಿಗಳಲ್ಲಿ ಪ್ರತಿನಿಯೋಜನೆ ಮೇಲೆ ಇರುವ ನೌಕರರ ಸಂಖ್ಯೆ (ತಾಲ್ಲೂಕುವಾರು ಮಾಹಿತಿ ನೀಡುವುದು);

ಇ. ಅಂತಹ ಸರ್ಕಾರಿ ನೌಕರರನ್ನು ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಐದು ವರ್ಷಗಳು

ಆ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಸಹಾಯಕ (ಪ್ರಥಮ ದರ್ಜೆ ಸಹಾಯಕ) ವೃಂದದ ನೌಕರರೊಬ್ಬರು ಮಾತ್ರ ದಿನಾಂಕ: 8-6-89ರಿಂದ ಚಿಕ್ಕೋಡಿ ಉಪ-ವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರತಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ. ಹಿಂದಿರುಗಿಸುವ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.